ಶಬ್ದಗಳಿಗೆ ಅಂಜಿದೊಡೆ ಎಂತಯ್ಯ' ಎಂದಂತೆ ಗದ್ದಲಗಳ ನಡುವೆಯೇ ಅಧ್ಯಯನ ಮಾಡಿ ಗ್ರಹಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. ಈ ರೀತಿ ನೀವಿರುವ ಒಟ್ಟೂ ಸನ್ನಿವೇಶವನ್ನು ಅರ್ಥ ಮಾಡಿಕೊಂಡು ನೀವು ಯಾವ ರೀತಿ ಅಧ್ಯಯನಕ್ಕೆ ತೊಡಗಬೇಕು ಎಂಬ ಒಂದು ಅಂದಾಜನ್ನು ಮಾಡಿಕೊಳ್ಳಿ.

### ವಿಷಯ ಪರಿಚಯ

ಮೊದಲೆಲ್ಲ ಪಠ್ಯಪುಸ್ತಕ ಸಿಕ್ಕಿದ ಕೂಡಲೆ ಅದರ ಸೌಂದರ್ಯವನ್ನು, ಗಾತ್ರವನ್ನು ನೋಡುವ ಸಂಭ್ರಮ ಇರುತ್ತಿತ್ತು. ಆದರೆ ಕೇವಲ ಆ ರೀತಿ ನೋಡಿದರೆ ಸಾಲದು. ನೀವು ಈ ವರ್ಷ ಅಧ್ಯಯನ ಮಾಡಬೇಕಾದ ವಿಷಯಗಳು ಯಾವುದೆಲ್ಲ ಎಂದು ಸುಮ್ಮನೇ ನೋಡುತ್ತಾ ಹೋಗಿ. ಆಯಾ ವಿಷಯದಲ್ಲಿ ಏನೇನಿರಬಹುದೆಂದು ಊಹಿಸಿ.

### ಅಧ್ಯಯನ ವಿಷಯ

ನೀವು ಅಧ್ಯಯನ ಮಾಡಲಿರುವ ವಿಷಯಗಳಲ್ಲಿ ಏನೇನಿರಬಹುದು ಎಂದು ಊಹಿಸಿದ ನಂತರ ಖಚಿತವಾಗಿ ಏನೇನಿದೆ ಎಂದು ನೋಡಿ. ಪ್ರತಿಯೊಂದು ಪಾಠದ ಶೀರ್ಷಿಕೆ ಮತ್ತು ಉಪಶೀರ್ಷಿಕೆಗಳನ್ನು ನೋಡುತ್ತಾ ಹೋದರೆ ಸಾಕು; ಯಾವ ಪಾಠದ ಅಧ್ಯಯನ ವಿಷಯವೇನು ಎಂದು ಗೊತ್ತಾಗಿಬಿಡುತ್ತದೆ. ಆದರೆ ಪ್ರತಿಯೊಂದು ಪುಟವನ್ನೂ ನೋಡಬೇಕು.

ಕಾಲೇಜು ವಿದ್ಯಾರ್ಥಿಗಳಿಗೆ ಇದು ಸ್ವಲ್ಪ ಬೇರೆ ರೀತಿ ಇರಬೇಕಾಗುತ್ತದೆ. ಸಿಲೆಬಸ್‌ನಲ್ಲಿ ಕೊಟ್ಟಿರುವ ಎಲ್ಲ ವಿಷಯಗಳೂ ಒಂದೇ ಪಠ್ಯಪುಸ್ತಕದಲ್ಲಿ ಇಲ್ಲದೆ ಇರಬಹುದು. ಆಗ ನೀವು ನಿಮ್ಮ ಅಧ್ಯಾಪಕರು ಪರಿಗಣಿಸುವ ಪಠ್ಯ ಪುಸ್ತಕ ಯಾವುದೆಂದು ಕೇಳಿ ತಿಳಿದು ಎರಡು ಅಥವಾ ಮೂರು ಪಾಠ ಪುಸ್ತಕಗಳನ್ನು ಪರಿಶೀಲಿಸಿ ಸಿಲೆಬಸ್‌ನಲ್ಲಿರುವ ವಿಷಯವು ಏನನ್ನು ಒಳಗೊಂಡಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

### ಪೂರ್ವಜ್ಞಾನದ ಅವಲೋಕನ

ಪಠ್ಯವಿಷಯಗಳನ್ನು ಪರಿಚಯಿಸಿಕೊಳ್ಳುತ್ತಾ ಹೋಗುವಾಗ ತಾನೇ ತಾನಾಗಿ ನಿಮಗೆ ಯಾವ ವಿಷಯದ ಬಗ್ಗೆ ಕೆಲವೊಂದು ವಿವರಗಳು ನಿಮಗೆ ಈಗಾಗಲೇ ಗೊತ್ತಿದೆ ಎನ್ನುವುದು ಹೊಳೆಯುತ್ತದೆ. ಆ ರೀತಿಯಲ್ಲಿ ಪ್ರಜ್ಞಾಪೂರ್ವಕವಾಗಿ ಯೋಚಿಸಬೇಕು ಅಷ್ಟೆ. ಹೊಸ ಪಠ್ಯದ ವಿಷಯಗಳಲ್ಲಿ ನಿಮಗೆ ಈಗಾಗಲೇ ಗೊತ್ತಿರುವ ವಿವರಗಳೇನು ಎಂಬುದನ್ನು ಯೋಚಿಸಿಕೊಂಡರೆ ಕಲಿಕೆಯ ಸಂದರ್ಭದಲ್ಲಿ ನಿಮಗೆ ಬಹಳ ಸುಲಭವಾಗುತ್ತದೆ. ಈಗಾಗಲೇ ಗೊತ್ತಿರುವ ವಿಷಯಗಳೊಂದಿಗೆ ಹೆಚ್ಚುವರಿ ವಿಷಯಗಳು ಸೇರಿಕೊಂಡು ಮಾನಸಿಕ ಚಿತ್ರ ವಿಸ್ತಾರವಾಗುತ್ತದೆ. ಅಲ್ಲದೆ ಕ್ಲಿಷ್ಟ ವಿಷಯಗಳನ್ನು ಹುಡುಕಿ ಅಧ್ಯಯನದ ಯೋಜನೆಯನ್ನು ರೂಪಿಸಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ.

### ಅಧ್ಯಾಪಕರ ಮನೋಭಾವ ಮತ್ತು ಬೋಧನಾ ವಿನ್ಯಾಸ

ನಿಮ್ಮ ತರಗತಿಯನ್ನು ನಿರ್ವಹಿಸುವ ಅಧ್ಯಾಪಕರ ಮನೋಭಾವವನ್ನು ಅರ್ಥ ಮಾಡಿಕೊಳ್ಳಿ. ಕೆಲವರು ತಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಿ ಮುಗಿಸುತ್ತೇವೆ ಎನ್ನುವ ಮನೋಭಾವದವರಿರುತ್ತಾರೆ. ಆಮೇಲೆ ನೀವಾಗಿ ಕೇಳದ ಹೊರತು ಅವರಾಗಿ ನಿಮ್ಮ ಬಳಿ ಬರುವುದಿಲ್ಲ. ಇನ್ನು ಕೆಲವರು ತನ್ನ ಕೆಲಸ ಮಾಡುವುದಕ್ಕಿಂತ

## ವೇಳಾಪಟ್ಟಿ

ತರಗತಿ ಪ್ರಾರಂಭವಾಗಿ ಒಂದು ವಾರದೊಳಗೆ ಅಧ್ಯಯನದ ವೇಳಾಪಟ್ಟಿಯನ್ನು ಮಾಡಿಕೊಳ್ಳಬೇಕು. ಅದು ಎರಡು ರೀತಿಯಲ್ಲಿರಬೇಕು. ಪ್ರತೀ ದಿನದ ವೇಳಾಪಟ್ಟಿ ಮತ್ತು ವಾರ್ಷಿಕ ವೇಳಾಪಟ್ಟಿ ಇರಬೇಕು. ವಾರ್ಷಿಕ ವೇಳಾಪಟ್ಟಿಯಲ್ಲಿ ರಜಾ ದಿನದ ವಿಶೇಷ ವೇಳಾಪಟ್ಟಿಯೂ ಇರಬೇಕು.

ವೇಳಾಪಟ್ಟಿ ಮಾಡುವಾಗ ಒಮ್ಮೆ ಓದಿದರೆ ಅರ್ಥವಾಗುವವರಿಗೆ ಕಡಿಮೆ ಸಮಯ ಸಾಕು. ಎಂತಹವರಿಗಾದರೂ ಸಾಮಾನ್ಯವಾಗಿ ಮೂರು ಬಾರಿ ಓದಿದಾಗ ಅರ್ಥ ಆಗುತ್ತದೆ. ಅಂತಹವರಿಗೆ ಸ್ವಲ್ಪ ಜಾಸ್ತಿ ಸಮಯ ಬೇಕಾಗುತ್ತದೆ.

ರಜಾದಿನದ ವೇಳಾಪಟ್ಟಿಯಲ್ಲಿ ಪಠ್ಯದ ಹೊರತಾಗಿ ವಾರ ಪತ್ರಿಕೆ, ಮಾಸ ಪತ್ರಿಕೆಗಳನ್ನು ಓದಲು, ಪಠ್ಯವಲ್ಲದ ಪುಸ್ತಕಗಳನ್ನು ಓದಲು ಸಮಯವಿರಬೇಕು. ದೈನಿಕ ವೇಳಾಪಟ್ಟಿಯಲ್ಲಿ ದಿನ ಪತ್ರಿಕೆಯ ಓದಿಗೂ ಸಮಯವಿರಬೇಕು.

ವೇಳಾಪಟ್ಟಿ ಮಾಡಿಕೊಳ್ಳುವಾಗ ಕ್ರೀಡಾ ದಿನಗಳು, ಕಲೆ–ಸಂಸ್ಕೃತಿ, ಆಚರಣೆಗಳು ಮತ್ತಿತರೆ ಪಠ್ಯವಲ್ಲದ ಕಲಿಕಾ ದಿನಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ವೇಳಾಪಟ್ಟಿ ಮಾಡುವಾಗ ಉದಾರವಾಗಿರಿ. ಅನುಸರಿಸುವಾಗ ಕಠಿಣರಾಗಿರಿ.

